**ದಿಃ 11.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಪಾಟೀ ಸವಾಲುಃ ಶ್ರೀ.ವಿ.ಎಸ್.ಎ ವಕೀಲರಿಂದಃ 2 ನೇ ಎದುರುದಾರರ ಪರವಾಗಿಃ**

7) ಅರ್ಜಿದಾರರಾದ ಲಕ್ಷ್ಮೀ, ರತ್ನವ್ವ, ಜಯಲಕ್ಷ್ಮೀ ಇವರೆಲ್ಲರೂ ಮದುವೆಯಾಗಿ ಗಂಡನ ಮನೆಯಲ್ಲಿಯೇ ಇರುತ್ತಾರೆ ಎಂದರೆ ಸರಿ. ನಾನು ಮತ್ತು 2 ನೇ ಅರ್ಜಿದಾರ ಇಬ್ಬರೂ ಕೂಲಿ ಕೆಲಸ ಮಾಡಿ ಪ್ರತಿದಿನ 500/- ರೂಗಳಂತೆ ವೇತನವನ್ನು ತೆಗೆದುಕೊಂಡು ಬಂದು ಜೀವನವನ್ನು ನಡೆಸುತ್ತೇವೆ ಎಂದರೆ ಸರಿ. ಈಗಲೂ ಸಹ ನಾನು ಮತ್ತು 2 ನೇ ಅರ್ಜಿದಾರ ಲಕ್ಷ್ಮಣ ನಮ್ಮ ತಂದೆ 6 ನೇ ಅರ್ಜಿದಾರ ಕೃಷ್ಣಪ್ಪ ಎಲ್ಲರೂ ಒಟ್ಟಿಗೆ ವಾಸಿಸುತ್ತೇವೆ ಎಂದರೆ ಸರಿ. ನಮ್ಮ ತಾಯಿಯು ಅಪಘಾತವಾಗಿ ಮೃತಪಡುವಾಗ ಮನೆಯಲ್ಲಿಯೇ ಗೃಹಿಣಿಯಾಗಿ ಕೆಲಸ ಮಾಡುತ್ತಿದ್ದಳು ಎಂದು ಅರ್ಜಿಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಪುನಃ ಆಕೆಯು ಕೂಲಿ ಕೆಲಸ ಮಾಡುತ್ತಿದ್ದಳು ಎಂದು ನುಡಿಯುತ್ತಾರೆ. ನಮ್ಮ ತಾಯಿ ಅಪಘಾತದಲ್ಲಿ ಮೃತ ಪಡುವ ಸಂದರ್ಭದಲ್ಲಿ ನಾನು ಮತ್ತು 2 ನೇ ಅರ್ಜಿದಾರ ಮತ್ತು ನನ್ನ ತಾಯಿ ಸೇರಿ ಕೂಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ತಾಯಿ ಮೊದಲಿಗೆ ಕೂಲಿ ಕೆಲಸ ಮಾಡಿ ಪ್ರತಿದಿನ 300/- ರೂಗಳನ್ನು ಗಳಿಸುತ್ತಿದ್ದಳು. ನಮ್ಮ ತಾಯಿ ಅಪಘಾತದಲ್ಲಿ ಮೃತ ಪಡುವಾಗ ಅವಳಿಗೆ 76 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಆದರೆ ಅವರಿಗೆ 75 ವರ್ಷ ವಯಸ್ಸಾಗಿತ್ತು. ಅಪಘಾತವಾದ ದಿವಸ ನಮ್ಮ ತಾಯಿ ಮೋಟಾರ ಸೈಕಲ್ ಮೇಲೆ ಹಿಂಬದಿ ಸವಾರಳಾಗಿ ಚಲಾಯಿಸುತ್ತಿದ್ದಳು.

**8)** 2 ನೇ ಅರ್ಜಿದಾರ ಮೋಟಾರ ಸೈಕಲ ಚಾಲನೆ ಮಾಡುತ್ತಿದ್ದ ಎಂದರೆ ಸರಿ. ಯಾವ ವ್ಯಕ್ತಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಅಪಘಾತವಾದ ತಕ್ಷಣವೇ ನಮ್ಮ ತಾಯಿಯನ್ನು ನಾವು ಮೊದಲಿಗೆ ಹಾವೇರಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಮ್ಮ ತಾಯಿಯು ರಸ್ತೆಯಲ್ಲಿಯೇ ಮೃತ ಪಟ್ಟಿರುತ್ತಾಳೆ. ಅಪಘಾತದಲ್ಲಿ ಮೃತ ಪಟ್ಟ ನಮ್ಮ ತಾಯಿ ಅದನ್ನು ವಾಹನ ಚಾಲನೆ ಮಾಡುತ್ತಿದ್ದ ಲಕ್ಷ್ಮಣ ಸೇರಿ ಹೋಗುವ ಸದರಿ ಮೋಟಾರ ಸೈಕಲ 1 ನೇ ಎದುರುದಾರನಿಗೆ ಸೇರಿದ್ದಾಗಿತ್ತು. ಸದರಿ 1 ನೇ ಎದುರುದಾರ ಅಣ್ಣಪ್ಪ ನಮಗೆ ಸಂಬಂಧಿಕನಾಗಬೇಕು. ನಾನು ನನ್ನ ಮುಖ್ಯ ಅರ್ಜಿಯಲ್ಲಿ ಕೇಳಿದಂತೆ 2 ನೇ ಎದುರುದಾರ ವಿಮೆ ಕಂಪನಿಯವರು ನಮಗೆ ಪರಿಹಾರ ಕೊಡಲು ಬಾಧ್ಯಸ್ಥರಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಾ.</u>**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.